ಪೂರಕವಾಗುವಂತೆ ಹೊಸ, ಅಪೂರ್ವ ಪರಿಭಾಷಾ ಪದಗಳು ಕಾಣಿಸಿಕೊಳ್ಳುತ್ತವೆ. 2020ರ ನಡುವೆ ಕಾಣಿಸಿಕೊಂಡ ಕೋವಿಡ್–19 / ಕರೋನಾ ವೈರಸ್ ಆತಂಕ, ತಲ್ಲಣಗಳು ಹಲವು ಹೊಸ ಪದಗಳ ಸೃಷ್ಟಿಗೆ ಕಾರಣವಾಗಿರುವುದನ್ನು ನಾವು ಗಮನಿಸಬಹುದು.

◆ **ಬರಹದ ಯಜಮಾನಿಕೆ ಅಥವಾ ಯಾಜಮಾನ್ಯ ಸಂಸ್ಕೃತಿಯ ಉಳಿದ ಅಭಿವ್ಯಕ್ತಿ ಪ್ರಕಾರಗಳನ್ನು ಹಿರಿಯಣ್ಣ–ದೊಡ್ಡಣ್ಣನಂತೆ ನೋಡುತ್ತದೆ ಅಂತ ಅನ್ನಿಸುವುದಿಲ್ಲವೇ? ಈ ಸಾಂಸ್ಕೃತಿಕ ರಾಜಕಾರಣದ ಚಲನೆಯ ಸ್ವರೂಪ ಏನಾಗಬಹುದು?**

ಇದೊಂದು ಅಪಾಯಕಾರಿ ಬೆಳವಣಿಗೆ. ಸಂಗೀತ–ನೃತ್ಯಗಳಲ್ಲಿಯೇ ಅಲ್ಲದೆ ಬಹುತೇಕ ಅಭಿವ್ಯಕ್ತಿ ಪ್ರಕಾರಗಳಲ್ಲಿ ಈ 'ಯಾಜಮಾನ್ಯ' ದೊಡ್ಡದಾಗಿ ಕಂಡಿದೆ. ಆದರೂ 'ಕಲಾಕೃತಿಯು ಮೊದಲು; ನಂತರವಷ್ಟೇ ಬರಹ' ಎನ್ನುವ ನನ್ನಂತಹವರೂ ಇದ್ದಾರೆ. ಬರಹವೂ ಒಂದು ಅಭಿವ್ಯಕ್ತಿಯೇ ಆಗಿದೆ ಎಂಬ ಧೋರಣೆಯೂ ಇದೆ; ಇರಲಿ. ಇದನ್ನು ಮೀರಲೆಂಬಂತೆ ನನ್ನಂತಹ ಕಲಾವಿದ–ಬರಹಗಾರರು ತಾವೇ ತಮ್ಮ ಕಲಾಕೃತಿಗಳ ಕುರಿತ ಟಿಪ್ಪಣಿಗಳನ್ನು ಬರೆಯುತ್ತಾರೆ. ಕೆಲವು ಹೊಸ ಮಾಧ್ಯಮಗಳಲ್ಲಿ ಕಲಾವಿದ/ಕಲಾವಿದೆಯ ಹೇಳಿಕೆಗಳೇ ಮಹತ್ವ ಪಡೆಯುತ್ತವೆ. ಉದಾಹರಣೆಗೆ ನೆಲಾಕೃತಿ (land art) ಇನ್‌ಸ್ಟಾಲೇಷನ್ ಅಭಿವ್ಯಕ್ತಿಗಳು. ಆದರೂ ಬಹುತೇಕ ಕಲಾವಿದ/ಕಲಾವಿದೆಯರು ಮತ್ತು ಇತಿಹಾಸಕಾರ/ವಿಮರ್ಶಕರು 'ಪರಸ್ಪರ' ಸಾಧಿಸಿ ಕೆಟ್‌ಲಾಗ್ ಸಾಹಿತ್ಯ ಬರೆಯುವುದು ಇಂದು ಹೆಚ್ಚು ಒಪ್ಪಿತವಾದಂತಿದೆ.

◆ **ಭಾರತೀಯ–ಪಾಶ್ಚಾತ್ಯ ದೃಶ್ಯಕಲೆಯ ನಡುವಿನ ಕೆಲ ಸ್ಥೂಲ–ಸೂಕ್ಷ್ಮ ವ್ಯತ್ಯಾಸಗಳನ್ನು ಪಟ್ಟಿ ಮಾಡಬಹುದೇ?**

ಕೆಲವು ದಶಕಗಳ ಹಿಂದೆ ಈ ವ್ಯತ್ಯಾಸವನ್ನು ಸೂಕ್ಷ್ಮವಾಗಿ 'ಇಹ' ಮತ್ತು 'ಪರ'ಗಳ ದೈವೀಕ ದೃಷ್ಟಿಯ ತಾತ್ವಿಕತೆ ಎಂದು ಹೇಳಬಹುದಿತ್ತು. ಆದರಿಂದು ಸಾಂಸ್ಕೃತಿಕ ಜಾಗತೀಕರಣದ ಪ್ರಭಾವದ ಹಿನ್ನೆಲೆಯಲ್ಲಿ ಎಲ್ಲರೂ ವಿಶ್ವಾತ್ಮಕ ಅನುಭವಗ್ರಾಹಿಗಳೇ ಆಗಿರಬಹುದಾದ ಸಾಧ್ಯತೆಗಳೇ ಹೆಚ್ಚಾಗಿವೆ. 'ಅಲ್ಲಿ', 'ಇಲ್ಲಿ' ಎಂಬ ಗೋಡೆಗಳನ್ನು ಮುರಿದು ಹಾಕಲಾಗಿದೆ. ನಮ್ಮ ಕಲಾಪರಂಪರೆಯನ್ನು ಗ್ರಹಿಸಿ, ಸಂಗ್ರಹಿಸಿ 'ಪರೋಕ್ಷ' ತಾತ್ವಿಕತೆಯನ್ನು ಬಿಂಬಿಸಿದ ಆನಂದಕುಮಾರಸ್ವಾಮಿಯವರಿಗೆ ಹೊರಗಿನ ತಾತ್ವಿಕತೆಯಲ್ಲಿಯೂ ನಮ್ಮ 'ಪರ', 'ಪರೋಕ್ಷ'ವಾದ ತಾತ್ವಿಕತೆಯೊಂದಿಗಿನ ಸಾಮ್ಯತೆಯನ್ನು ಅಧ್ಯಯನ ಮಾಡಿ ನಮ್ಮೊಟ್ಟಿಗೇ ಇರಿಸಿ ನೋಡಿದರು. ಪಾಶ್ಚಾತ್ಯ ಮತ್ತು ಯುರೋಪಿನ 'ಪ್ರತ್ಯಕ್ಷ' ತಾತ್ವಿಕತೆಯಲ್ಲಿ 'ಇಹ'ದ ವೈಭವೀಕರಣವಿದೆ; ಭೌತಿಕವಾದದ ಅನುಕರಣ ಇದೆ. ಹಾಗೆ ನೋಡಿದರೆ ವಿಶ್ವಾತ್ಮಕ ದೃಷ್ಟಿಯ ಸೌಂದರ್ಯವನ್ನು ಕಾಣದೆ ಇರಲಾಗದು. ಪ್ಲೇಟೋ, ಅರಿಸ್ಟಾಟಲ್, ಮೆಯ್ಸ್ಟರ್, ವಕ್ಹಾರ್ಟ್, ಫ್ರೆಡರಿಕ್ ನೀಷೆ, ಸಂತ ಥಾಮಸ್ ಅಕ್ವಿನ್ಸ್ ಮೊದಲಾದವರೆಲ್ಲರೂ ನಮ್ಮ ಪರಂಪರೆಯ

